ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ : DEPARTMENT / SUBJECT: ________

ಪತ್ರಿಕೆಯ ಹೆಸರು : NAME OF THE NEWS PAPER: ________ ದಿನಾಂಕ : DATE : 2?/11/1?

# ಸಂಸದೀಯ ಸಮಿತಿ ಸಭೆಗಳಲ್ಲೂ ಕನ್ನಡ

20/11/17

• ಸಿದ್ದಯ್ಯ ಹಿರೇಮಠ

ನವದೆಹಲಿ: ಸಂಸತ್‌ನ ವಿವಿಧ ಸ್ಥಾಯಿ ಸಮಿತಿಗಳಿಗೆ ನೇಮಕವಾಗುವ ರಾಜ್ಯದ ಸಂಸತ್ ಸದಸ್ಯರು ಸಭೆಗಳಲ್ಲಿ ಎದುರಿಸುತ್ತಿದ್ದ ಭಾಷಾ ಸಮಸ್ಯೆಗೆ ತೆರೆ ಬಿದ್ದಿದೆ.

ಸಾಮಾಜಿಕ ನ್ಯಾಯ ಸಮಿತಿ ಸದಸ್ಯರಾಗಿರುವ ಬಳ್ಳಾರಿ ಸಂಸದ ಎಸ್. ದೇವೇಂದ್ರಪ್ಪ ಅವರ ಬೇಡಿಕೆಯ ಮೇರೆಗೆ ಹಿಂದಿ ಮತ್ತು ಇಂಗ್ಲಿಷ್‌ನಲ್ಲಿರುವ ಇತರ ಸದಸ್ಯರ ನಡಾವಳಿಗಳನ್ನು ಕನ್ನಡಕ್ಕೆ ಅನುವಾದಿಸುವ ಸೌಲಭ್ಯ ಒದಗಿಸುವ ಮೂಲಕ ಭಾಷೆಯ ತೊಡಕನ್ನು ನಿವಾರಿಸಲಾಗಿದೆ.

ಲೋಕಸಭೆಯಲ್ಲಿ ಕನ್ನಡ ಭಾಷಣದ ಇಂಗ್ಲಿಷ್ ಮತ್ತು ಹಿಂದಿ ಅನುವಾದಕ್ಕೆ ಅವಕಾಶ ಕೋರಿದ್ದ ಜೆ.ಎಚ್. ಪಟೇಲ್ ಅವರು ಯಶಸ್ಸನ್ನು ಕಂಡು 5 ದಶಕ ಕಳೆದ ಈ ಸಂದರ್ಭದಲ್ಲಿ ಸಂಸದೀಯ ಸಮಿತಿ ಸಭೆಗಳಲ್ಲೂ ಕನ್ನಡದ ಕಲರವ ಕೇಳಿಬಂದಿದೆ.

'ಅಕ್ಟೋಬರ್‌ನಲ್ಲಿ ನಡೆದಿದ್ದ ಸಮಿತಿಯ ಮೊದಲ ಸಭೆಯಲ್ಲಿ ಭಾಷಾ ಸಮಸ್ಯೆ ಎದುರಾಗಿತ್ತು. ಮುಂದಿನ ಸಭೆಯಲ್ಲಿ ಕನ್ನಡಕ್ಕೆ ಅವಕಾಶ ನೀಡಬೇಕು ಎಂದು ಕೋರಿದ್ದೆ. ಇದೇ 5 ಮತ್ತು 6ರಂದು ನಡೆದ ಸಭೆಯಲ್ಲಿ ಬೇಡಿಕೆ ಈಡೇರಿತು. ಕನ್ನಡದಲ್ಲಿದ್ದ ನನ್ನ ಭಾಷಣವನ್ನು ಸಮಿತಿಯ ಅಧ್ಯಕ್ಷರು ಮತ್ತು ಇತರ ಸದಸ್ಯರಿಗೆ ಅರ್ಥವಾಗುವಂತೆ ತಕ್ಷಣವೇ ಇಂಗ್ಲಿಷ್ ಮತ್ತು ಹಿಂದಿಗೆ, ಅವರು ಮಾತನಾಡಿದ್ದನ್ನು ನನಗೆ ಕನ್ನಡಕ್ಕೆ ಅನುವಾದಿಸಲಾಯಿತು' ಎಂದು ಸಂಸದ ಎಸ್.ದೇವೇಂದ್ರಪ್ಪ 'ಪ್ರಜಾವಾಣಿ'ಗೆ ತಿಳಿಸಿದರು.

'ಸಂಸತ್‌ನ ಉಭಯ ಸದನಗಳ ಕಲಾಪಕ್ಕೆ ಮುನ್ನ ತಿಳಿಸುವಂತೆಯೇ, ಸಾಮಾಜಿಕ ನ್ಯಾಯ ಸಮಿತಿ ಸಭೆಯ ನಡಾವಳಿ ಕುರಿತು ಮೊದಲೇ ಮಾಹಿತಿ ನೀಡಲಾಗಿತ್ತು. ಸಮಿತಿಯ ಅಧ್ಯಕ್ಷರ ಸೂಚನೆಯ ಮೇರೆಗೆ ಸಭೆಗೆ ತೆರಳಿ ಅನುವಾದ ಕಾರ್ಯದಲ್ಲಿ ಭಾಗವಹಿಸಿದೆ' ಎಂದು ಹಿರಿಯ ಸಂಸದೀಯ ಅನುವಾದಕ, ಕರ್ನಾಟಕದ ಎಸ್.ಪಿ. ಚಂದ್ರಶೇಖರ್ ಹೇಳಿದರು.